**ಸಾಕ್ಷಿಯನ್ನು ದಿಃ 05.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಿ.ಪಿ-12        ಒಂದು ಐ.ಪಿ ಬಿಲ್ಲು

**ಪಾಟೀ ಸವಾಲುಃ ಎದುರುದಾರರ ಪರ  ವಕೀಲರಿಂದಃ**

ಅಪಘಾತದ ದಿನ ನಾನು ಹಿಂಬದಿ ಸವಾರನಾಗಿದ್ದೆ. ಬೈಕ್ ಸವಾರನ ಜೊತೆ ನಾನು ಕೆಲಸ ಮಾಡುತ್ತಿದ್ದೆ. ಆ ದಿನ ಕೆಲಸ ಮುಗಿಸಿ ಮನೆ ಕಡೆ ಹೋಗುತ್ತಿದ್ದೇವು. ಅಪಘಾತದ ಸ್ಥಳ ಮುಖ್ಯ ರಸ್ತೆ ಎಂದರೆ ಸರಿ. ಅಪಘಾತ ರಾತ್ರಿ 9.00 ಗಂಟೆಯಲ್ಲಿ ನಡೆದಿದೆ ಎಂದರೆ ಸರಿ. ಆ ದಿನ ನಾವು ಮದ್ಯಪಾನ ಮಾಡಿದ್ದೇವು ಎಂದರೆ ಸರಿಯಲ್ಲ. ಬೈಕ್ ಸವಾರನಿಗೆ ಮತ್ತು ನನಗೆ ಚಾಲನಾ ಪರವಾನಗಿ ಇತ್ತು. ನನ್ನ ಡಿಎಲ್ ನ್ನು ಹಾಜರುಪಡಿಸಿದ್ದೇನೆ. ನಾವು ಆ ದಿನ ಇಬ್ಬರು ಮಾತನಾಡಿಕೊಂಡು ಹೋಗುತ್ತಿದ್ದು, ರಸ್ತೆಯ ಮೇಲೆ ನಿಗಾ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ಮೈಸೂರು ಕಡೆಗೆ ಹೋಗುತ್ತಿದ್ದೇವು. ನಾವು ರಸ್ತೆಯ ಬಲಭಾಗಕ್ಕೆ ತಿರುಗಿಸಿಕೊಳ್ಳಲು ನಿಂತುಕೊಂಡಿದ್ದೇವು. ನಕ್ಷೆಯಲ್ಲಿ ಬಲಭಾಗಕ್ಕೆ ಯಾವುದೇ ರಸ್ತೆ ಕಾಣುತ್ತಿಲ್ಲ ಎಂದರೆ ಸರಿ. ಅಪಘಾತದ ಸ್ಥಳ ಮೈಸೂರಿನ ಕಡೆ ಹೋಗುವ ದಿಕ್ಕಿನ ಬಲಭಾಗದ ತುದಿಗೆ ಬರುತ್ತದೆ ಎಂದರೆ ಸರಿ. ಕಾರು ಎದುರುಗಡೆಯಿಂದ ಬಂದು ಡಿಕ್ಕಿಪಡಿಸಿದೆ. ಅದನ್ನು ನೇರ ರಸ್ತೆಯಾದ ಕಾರಣ 500 ಮೀ ದೂರದಲ್ಲಿ ಕಾಣುತ್ತದೆ ಎಂದರೆ ಸರಿ. ನಕ್ಷೆಯಲ್ಲಿ ಬಲಭಾಗಕ್ಕೆ ರಸ್ತೆ ಕಾಣಿಸದೇ ಇರುವ ಕಾರಣ ನಾವು ಬಲಭಾಗಕ್ಕೆ ತಿರುಗಿಸಿಕೊಳ್ಳಲು ನಿಂತಿದ್ದೇವು ಎಂದರೆ ಸರಿಯಲ್ಲ. ಕಾರಿನವರಿಗೆ ಅಪಘಾತದ ಸ್ಥಳ ಅವರ ಎಡಭಾಗಕ್ಕೆ ಇದೆ ಎಂದರೆ ಸರಿ. ಆದ ಕಾರಣ ಅಪಘಾತ ನಮ್ಮ ಅಜಾಗರೂಕತೆಯಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ವಾಹನದ ಚಾಲಕ, ಮಾಲೀಕ ವಿಮಾದಾರರನ್ನು ಪಕ್ಷಗಾರರನ್ನು ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ವಾಹನಗಳಿಗೆ ಎಲ್ಲೆಲ್ಲಿ ಜಕ್ಕಂ ಆಗಿದೆ ಎಂದು ಗೊತ್ತಿಲ್ಲ. ಪೊಲೀಸ್

ದಾಖಲೆಗಳಲ್ಲಿ ಏನಿದೆ ಎಂದು ತಿಳಿದುಕೊಂಡಿಲ್ಲ. ಐಎಂವಿ ವರದಿಯ ಪ್ರಕಾರ ಸಹ ನಮ್ಮ ಅಜಾಗರೂಕತೆ ಕಂಡು ಬರುತ್ತದೆ ಎಂದರೆ ಸರಿಯಲ್ಲ.

ನಾಗೇಂದ್ರ ರಸ್ತೆ ನಿಯಮವನ್ನು ಪಾಲಿಸದೇ ವಾಹನವನ್ನು ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ನಾನು ಭದ್ರವಾಗಿ ಹಿಡಿದುಕೊಂಡು ಕುಳಿತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜಾಗರೂಕತೆಯಿಂದ ಅಪಘಾತವಾಗಿರುವ ಕಾರಣ ಅದೇ ದಿನ ದೂರು ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಪೆಟ್ಟಾಗಿದ್ದು, ಪರಿಹಾರ ಪಡೆಯುವ ಉದ್ದೇಶದಿಂದ ಪೊಲೀಸರು, ಆಸ್ಪತ್ರೆಯವರೊಡನೆ ಶಾಮೀಲಾಗಿ ಎದುರುದಾರರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರ 3-4 ತಿಂಗಳು ಆಸ್ಪತ್ರೆಗೆ ಹೋಗಿದ್ದೇನೆ. ಈಗಲೂ ನೋವು ಬಂದಾಗ ಹೋಗುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಅಪಘಾತದಲ್ಲಿ ನನಗೆ ಮುಖಕ್ಕೆ ಪೆಟ್ಟಾಗಿದೆ ಎಂದರೆ ಸರಿ. ಹೆಲ್ಮೆಟ್ ಹಾಕಿದ್ದರೆ ಮುಖಕ್ಕೆ ಪೆಟ್ಟಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಹೆಲ್ಮೆಟ್ ಹಾಕಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ಪ್ರಮಾಣ ಪತ್ರದಲ್ಲಿ ಬರೆಸಿರುವ ಯಾವ ಸಮಸ್ಯೆಯೂ ಇಲ್ಲ ಎಂದರೆ ಸರಿಯಲ್ಲ. ನಾನು ಹಿಂದಿನ ಗಾರೆ ಕೆಲಸವನ್ನು ಈಗಲೂ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನಂತೆ ಈಗಲೂ ಜೀವನ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಹೆಚ್ಚಿನ ಪರಿಹಾರಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ನಮ್ಮ ಚಾಲಕನ ತಪ್ಪಿರುವ ಕಾರಣ ನಾನು ಪರಿಹಾರ ಪಡೆಯಲು ಬಾಧ್ಯನಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**

**ಮತ್ತು ಎಂ.ಎ.ಸಿ.ಟಿ., ಮೈಸೂರು.**